ಬುಧವಾರ,22 ಆಗಸ್ಟ್ 2018 | ಪುಟಗಳು: 10+4+2 | ಬೆಲೆ: ₹ 5.00
jaykarnataka.com
ಸಂಚಿಕೆ: 27
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ



24 ಸಾವಿರ ಸೀಟುಗಳು ಬಾಕಿ ಉಳಿದಿವೆ, ಅವೈಜ್ಞಾನಿಕ ಸೀಟು ಹಂಚಿಕೆಯೂ ಕಾರಣ

# ಎಂಜಿನಿಯರಿಂಗ್ ಸೀಟು ಕೇಳೋರೇ ಇಲ್ಲ

**ಶಿವರಾಮ್** ಬೆಂಗಳೂರು

ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಬೇಡಿಕೆ ಕುಸಿಯುತ್ತಿದ್ದು, ಈ ವರ್ಷ ಸರಕಾರಿ ಕೋಟಾದ 21 ಸಾವಿರ ಸೀಟುಗಳು ಭರ್ತಿಯಾಗದೆ ಉಳಿದಿವೆ. ಮತ್ತೊಂದೆಡೆ 33 ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ 'ಕಾಮೆಡ್-ಕೆ' ಕೋಟಾದಡಿ ಒಂದೇ ಒಂದು ಸೀಟು ಭರ್ತಿಯಾಗಿಲ್ಲ. 43 ಖಾಸಗಿ ಕಾಲೇಜುಗಳಲ್ಲಿ ಶೇ 25ಕ್ಕಿಂತ ಕಡಿಮೆ ಸೀಟುಗಳು ಭರ್ತಿಯಾಗಿರುವುದು ಆಡಳಿತ ಮಂಡಳಿಗಳನ್ನು ಕಂಗೆಡಿಸಿದೆ.

ಬೇಡಿಕೆಯಿರುವ ಪ್ರತಿಷ್ಠಿತ [illegible]ರು ಎಂಜಿನಿಯರಿಂಗ್ ಕಾಲೇಜುಗಳಲ್ಲಿ 'ಕಾಮೆಡ್-ಕೆ' ಕೋಟಾದಡಿ ಎಲ್ಲಾ ಸೀಟುಗಳು ಭರ್ತಿಯಾದರೆ, 10 ಕಾಲೇಜುಗಳಲ್ಲಿ ಶೇ 80ರಿಂದ 99ರಷ್ಟು, ಹಾಗೂ 16 ಕಾಲೇಜುಗಳಲ್ಲಿ ಶೇ 50ರಿಂದ 79, ಇನ್ನೂ 10 ಕಾಲೇಜುಗಳಲ್ಲಿ ಶೇ 25ರಿಂದ ಶೇ 49.99ರಷ್ಟು ಸೀಟುಗಳಷ್ಟೇ ಭರ್ತಿಯಾಗಿವೆ.

ಮೂಲಭೂತ ಸೌಕರ್ಯಗಳಿಲ್ಲದೆ ನಾಯಿಕೊಡೆಗಳಂತೆ ತಲೆಯೆತ್ತುತ್ತಿರುವ ಎಂಜಿನಿಯರಿಂಗ್ ಕಾಲೇಜುಗಳನ್ನು ಮುಚ್ಚುವುದು ಅನಿವಾರ್ಯ ಎಂದು ಎಐಸಿಟಿಇ ಎಚ್ಚರಿಕೆ ನೀಡುತ್ತಿದ್ದರೂ 75 ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ವಿದ್ಯಾರ್ಥಿಗಳನ್ನು ಸೆಳೆಯುವಲ್ಲಿ ವಿಫಲವಾಗಿವೆ.

**ಸರಕಾರಿ ಕೋಟಾದ ಸೀಟು 21 ಸಾವಿರ ಉಳಿಕೆ**

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸರಕಾರಿ ಕೋಟಾದ ಮೂಲಕ ಹಂಚಿಕೆ ಮಾಡುವ 64 ಸಾವಿರ ಎಂಜಿನಿಯರಿಂಗ್ ಸೀಟುಗಳ ಪೈಕಿ ಈ ವರ್ಷ 21 ಸಾವಿರ ಸೀಟುಗಳು ಭರ್ತಿಯಾಗದೆ ಉಳಿದಿವೆ. ಹಾಗೆಯೇ, 'ಕಾಮೆಡ್-ಕೆ' ಕೋಟಾದಡಿ 16,236 ಸೀಟುಗಳ ಪೈಕಿ 10,175 ಸೀಟುಗಳು ಖಾಲಿ ಬಿದ್ದಿವೆ.

ಕಂಪ್ಯೂಟರ್ ಸೈನ್ಸ್, ಇನ್ಫಾರ್ಮೇಷನ್ ಸೈನ್ಸ್ ಆ್ಯಂಡ್ ಎಂಜಿನಿಯರಿಂಗ್, ಮೆಕ್ಯಾನಿಕಲ್ ಹಾಗೂ ಸಿವಿಲ್ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಹೆಚ್ಚಿನ ಬೇಡಿಕೆಯಿವೆ. ಎಲ್ಲ ಕಾಲೇಜುಗಳಲ್ಲಿಯೂ ಹೆಚ್ಚಿನ ವಿದ್ಯಾರ್ಥಿಗಳು ಈ ಕೋರ್ಸ್‌ಗಳನ್ನೇ ಆಯ್ಕೆ ಮಾಡಿಕೊಳ್ಳಲು ಇಚ್ಛಿಸುತ್ತಾರೆ. ಇದರಿಂದ ಉಳಿದ ಕೋರ್ಸ್‌ಗಳಲ್ಲಿ ಸೀಟುಗಳು ಭರ್ತಿಯಾಗದೆ ಹಾಗೇ ಉಳಿಯುತ್ತಿವೆ.

''ಕಂಪ್ಯೂಟರ್ ಸೈನ್ಸ್ ಹಾಗೂ ಇನ್ಫಾರ್ಮೇಷನ್ ಸೈನ್ಸ್ ಆ್ಯಂಡ್ ಎಂಜಿನಿಯರಿಂಗ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಖಾಸಗಿ ಕಾಲೇಜುಗಳಿಗೆ ಅಂತಹ ಖರ್ಚು ಬರುವುದಿಲ್ಲ. ಆದರೆ, ಮೆಕ್ಯಾನಿಕಲ್ ಹಾಗೂ ಸಿವಿಲ್ ಎಂಜಿನಿಯರಿಂಗ್ ಕೋರ್ಸ್‌ಗಳನ್ನು ಆರಂಭಿಸಲು ಮೂಲಭೂತ ಸೌಕರ್ಯಕ್ಕೆ ಕನಿಷ್ಠ ತಲಾ ಒಂದು ಕೋಟಿ ರೂ. ಖರ್ಚು ಬರಲಿದೆ. ಬಹುತೇಕ ಕಾಲೇಜುಗಳಲ್ಲಿ ಈ ಎರಡು ಕೋರ್ಸ್‌ಗಳಿಗೆ ಅಗತ್ಯ ಮೂಲಸೌಕರ್ಯಗಳೇ ಇಲ್ಲ. ಹೀಗಾಗಿ, ವಿದ್ಯಾರ್ಥಿಗಳು ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳುತ್ತಿಲ್ಲ,'' ಎಂದು ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರೊಬ್ಬರು ಪ್ರತಿಕ್ರಿಯಿಸಿದ್ದಾರೆ.

...ಲು ಉತ್ಪಾದಕರ ಒಕ್ಕೂಟ ನಿ.,
...ರ, ಮಂಗಳೂರು – 575 005

ವಾರ್ತಾ ಭಾರತಿ
22 ಆಗಸ್ಟ್ 2018
ಬುಧವಾರ
◆ ಮಂಗಳೂರು ◆ ಬೆಂಗಳೂರು ◆ ಶಿವಮೊಗ್ಗ
VARTHABHARATHI KANNADA DAILY

# ರಾಜ್ಯದ 30ಕ್ಕೂ ಅಧಿಕ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಶೂನ್ಯ ದಾಖಲಾತಿ!

ಬೆಂಗಳೂರು, ಆ.21: ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ 30ಕ್ಕೂ ಅಧಿಕ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾಮೆಡ್ ಕೆ ಅಡಿಯಲ್ಲಿ ಪದವಿ ಕೋರ್ಸ್‌ಗಳಿಗೆ ಒಬ್ಬ ವಿದ್ಯಾರ್ಥಿಯೂ ದಾಖಲಾಗಿಲ್ಲ.

2018-19ನೇ ಶೈಕ್ಷಣಿಕ ಸಾಲಿನಲ್ಲಿ ಸರಕಾರ ಮತ್ತು ಕಾಮೆಡ್ ಕೆ ಅಡಿ ಇಂಜಿನಿಯರಿಂಗ್ ಪದವಿ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆ ಇತ್ತೀಚೆಗಷ್ಟೇ ಮುಗಿದಿದೆ. ಕಾಮೆಡ್ ಕೆ ಯಿಂದ ಸಿಕ್ಕಿರುವ ಅಂಕಿಅಂಶಗಳ ಪ್ರಕಾರ, ಕಾಮೆಡ್ ಕೆ ಕೋಟಾದಡಿ ಇರುವ ಸೀಟುಗಳಲ್ಲಿ ಶೇಕಡಾ 62ರಷ್ಟು ಸೀಟುಗಳು ಭರ್ತಿಯಾಗಿಲ್ಲ. ಈ ವರ್ಷ ಕಾಮೆಡ್ ಕೆ ಅಡಿ 16,236 ಸೀಟುಗಳು ಲಭ್ಯವಾಗಿದ್ದು ಅವುಗಳಲ್ಲಿ 10,175 ಸೀಟುಗಳು ಇನ್ನೂ ಖಾಲಿ ಉಳಿದಿವೆ ಎನ್ನಲಾಗಿದೆ.


ಸಾಂದರ್ಭಿಕ ಚಿತ್ರ

ರಾಜ್ಯದ 33 ಕಾಲೇಜುಗಳಲ್ಲಿ ಒಬ್ಬ ವಿದ್ಯಾರ್ಥಿಯೂ ಪ್ರವೇಶ ಪಡೆದಿಲ್ಲ. ಇನ್ನು 33 ಕಾಲೇಜುಗಳಲ್ಲಿ 10ಕ್ಕಿಂತ ಕಡಿಮೆ ಪ್ರವೇಶಾತಿಯಾಗಿದೆ. ರಾಜ್ಯದಲ್ಲಿ ಕೇವಲ 6 ಕಾಲೇಜುಗಳಲ್ಲಿ ಶೇಕಡಾ 100ರಷ್ಟು ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು ಇನ್ನು 10 ಕಾಲೇಜುಗಳಲ್ಲಿ ಶೇಕಡಾ 80ರಿಂದ 99ರಷ್ಟು ಸೀಟುಗಳು ಭರ್ತಿಯಾಗಿವೆ. ಅಲ್ಲದೆ, ಕಾಮೆಡ್ ಕೆ ಮಾತ್ರವಲ್ಲದೆ ಸರಕಾರದ ಒಟ್ಟು 64 ಸಾವಿರ ಸೀಟುಗಳಲ್ಲಿ 21 ಸಾವಿರಕ್ಕೂ ಅಧಿಕ ಇಂಜಿನಿಯರಿಂಗ್ ಸೀಟುಗಳು ಭರ್ತಿಯಾಗದೆ ಖಾಲಿ ಉಳಿದಿವೆ ಎಂದು ತಿಳಿದುಬಂದಿದೆ.

ಶೇಕಡಾ 100ರಷ್ಟು ಪ್ರವೇಶಾತಿ ಪಡೆದಿರುವ 6 ಕಾಲೇಜುಗಳು 1,349 ಸೀಟುಗಳನ್ನು ಹಂಚಿಕೊಂಡಿದ್ದು ರಾಜ್ಯದಲ್ಲಿನ ಪ್ರಮುಖ ಕಾಲೇಜುಗಳಾಗಿವೆ. 6 ಕಾಲೇಜುಗಳಲ್ಲಿ 4 ಬೆಂಗಳೂರಿನಲ್ಲಿ ಮತ್ತು ಎರಡು ಮೈಸೂರುಗಳಲ್ಲಿವೆ.

ಕಾಮೆಡ್ ಕೆ ಅಧಿಕಾರಿಗಳು ಮತ್ತು ಕಾಲೇಜು ವ್ಯವಸ್ಥಾಪಕ ಮಂಡಳಿ ಹೇಳುವ ಪ್ರಕಾರ, ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಪ್ರವೇಶ ಇತ್ತೀಚೆಗೆ ಕಡಿಮೆಯಾಗುತ್ತಿರುವುದು ಹೊಸದಲ್ಲ. ಕಳೆದ ಎಂಟು ವರ್ಷಗಳಿಂದ ಇದೇ ಪರಿಸ್ಥಿತಿಯಿದೆ ಎಂದು ಕಾಮೆಡ್ ಕೆ ಕಾರ್ಯನಿರ್ವಹಣಾ ಕಾರ್ಯದರ್ಶಿ ಡಾ. ಎಸ್. ಕುಮಾರ್ ಹೇಳಿದ್ದಾರೆ.

9ನೇ ಪುಟಕ್ಕೆ

## ಶೂನ್ಯ ದಾಖಲಾತಿ

ಇತ್ತೀಚೆಗೆ ವಿದ್ಯಾರ್ಥಿಗಳು ಬುದ್ಧಿವಂತರಾಗಿದ್ದಾರೆ. ಜಾಹೀರಾತುಗಳಿಗೆ ಮತ್ತು ಇತರ ಟೊಳ್ಳು ಭರವಸೆಗಳಿಗೆ ಮಾರು ಹೋಗುವುದಿಲ್ಲ. ಇಂಜಿನಿಯರಿಂಗ್ ಕಾಲೇಜುಗಳು ಮೂಲ ಸೌಕರ್ಯಗಳನ್ನು ಒದಗಿಸಿ ಗುಣಮಟ್ಟದ ಶಿಕ್ಷಣ ನೀಡಬೇಕಾಗಿದೆ ಎಂದು ಕಾಮೆಡ್ ಕೆ ಅಧಿಕಾರಿಗಳು ಅಭಿಪ್ರಾಯಿಸಿದ್ದಾರೆ.

**ಸಿವಿಲ್, ಮೆಕಾನಿಕಲ್ ವಿಭಾಗಕ್ಕೆ ಕಡಿಮೆ ಬೇಡಿಕೆ:** ಕಳೆದ ಮೂರು-ನಾಲ್ಕು ವರ್ಷಗಳಿಂದ ಕಂಪ್ಯೂಟರ್ ಸೈನ್ಸ್ ವಿಭಾಗವೂ ಮೆಕಾನಿಕಲ್ ಮತ್ತು ಸಿವಿಲ್ ವಿಭಾಗದಂತೆ ಮೂಲೆಗುಂಪಾಗುತ್ತಿತ್ತು. ಆದರೆ, ಈ ವರ್ಷ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಕಂಪ್ಯೂಟರ್ ಸೈನ್ಸ್ ವಿಭಾಗ ಭರ್ತಿಯಾಗಿದೆ. ಸಿವಿಲ್ ಮತ್ತು ಮೆಕ್ಯಾನಿಕಲ್ ವಿಭಾಗಕ್ಕೆ ಬೇಡಿಕೆ ಕಡಿಮೆಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮಂಗಳೂರು ಬುಧವಾರ 22 ಆಗಸ್ಟ್ 2018 ಸಂಪುಟ 40, ಸಂಚಿಕೆ 157, ಪುಟಗಳು 12+4, ಬೆಂಗಳೂರು-ಮಂಗಳೂರು-ಶಿವಮೊಗ್ಗ-ಹುಬ್ಬಳ್ಳಿ REG.No.MNG / 121 / 2018-20 Posted at kodialbail P.O / RNI:29813/78/ Daily



ಹೊಸ ದಿಗಂ

# ಸ್ವರಕ್ಷಣೆ ಶಕ್ತಿಯು ವ್ಯಕ್ತಿಯ ಮನಸ್ಸಿನಲ್ಲಿದೆ ; ಸ್ನಾಯುಗಳಲ್ಲಿ ಅಲ್ಲ





**ಮಂಗಳೂರು:** ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ಮೊದಲ ವರ್ಷದ ವಿದ್ಯಾರ್ಥಿಗಳಿಗೆ ಸ್ವಯಂ ರಕ್ಷಣಾ ತರಬೇತಿಯನ್ನು ಇತ್ತೀಚೆಗೆ ಆಯೋಜಿಸಲಾಯಿತು

ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಆಕ್ರಮಣ ಮತ್ತು ಕಿರುಕುಳಗಳಿಂದ ರಕ್ಷಿಸಿಕೊಳ್ಳಲು ಸಹ್ಯಾದ್ರಿ ಎನ್ಎಸ್ ಎಸ್ ಯುನಿಟ್ ಸ್ವಯಂ ರಕ್ಷಣಾ ತರಬೇತಿಯನ್ನು ಸ್ವರಕ್ಷಾ ಮಹಿಳಾ ಟ್ರಸ್ಟ್‌ನ ಸಂಸ್ಥಾಪಕ ಮತ್ತು ಕಲಾವಿದ ಕಾರ್ತಿಕ್ ಎಸ್. ಕಟೀಲು ಸಹಾಯ ಮಾಡಲು ಅವರ ತಾಯಿ ಶೋಭಲತಾ ಅವರೊಂದಿಗೆ ನಡೆಸಿಕೊಟ್ಟರು.

ಅಪಾಯದ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ತಮ್ಮನ್ನು ರಕ್ಷಿಸಿಕೊಳ್ಳಲು ಬಳಸಬಹುದಾದ ಹಲವಾರು ಸ್ವಯಂ- ರಕ್ಷಣಾ ತಂತ್ರಜ್ಞಾನಗಳು ಮತ್ತು ತಂತ್ರಗಳನ್ನು ಪ್ರದರ್ಶಿಸಿದರು. ಆಕ್ರಮಣಕಾರರಿಂದ ಸ್ವಯಂ ರಕ್ಷಿಸಲು ಬಳಸಬಹುದಾದ ಮಾನಸಿಕ ಮತ್ತು ತಾರ್ಕಿಕ ತಂತ್ರಗಳನ್ನು ಅವರು ವಿವರಿಸಿದರು.

**ಸ್ವಯಂ ರಕ್ಷಣಾ ತರಬೇತಿ**

ಅಪಹರಣ, ದೌರ್ಜನ್ಯಗಳು, ಗ್ಯಾಂಗ್- ಅತ್ಯಾಚಾರಗಳು ಮತ್ತು ಇತರ ಅಪಾಯಕಾರಿ ಸಂದರ್ಭಗಳಲ್ಲಿ ಬಲಿಯಾಗುವುದನ್ನು ತಡೆಯಲು ವಿದ್ಯಾರ್ಥಿಗಳು ಸ್ವಯಂ ರಕ್ಷಣಾ ತರಬೇತಿಯನ್ನು ತೆಗೆದುಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಸ್ವರಕ್ಷಣೆಯ ಶಕ್ತಿಯು ವ್ಯಕ್ತಿಯ ಮನಸ್ಸಿನಲ್ಲಿದೆ ಮತ್ತು ಸ್ನಾಯುಗಳಲ್ಲಿ ಅಲ್ಲ ಎಂದು ಅವರು ಹೇಳಿದರು.

ಬುಧವಾರ, ಆಗಸ್ಟ್ 22, 2018 | ಮಂಗಳೂರು | ₹ 5.00 | ಸಂಪುಟ 20 | ಸಂಚಿಕೆ 233 | ಪುಟ 16 + 2 + 4
www.prajavani.net
/prajavani.net

# ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಕ್ಷೇಮ ಕುಶಲ**

ಮನುಷ್ಯ ಆಲಸ್ಯವನ್ನು ಎಲ್ಲಿಯವರೆಗೆ ಬಿಡುವುದಿಲ್ಲವೋ ಅಲ್ಲಿಯವರೆಗೆ ಜೀವನದಲ್ಲಿ ಏಳಿಗೆ ಕಾಣಲು ಸಾಧ್ಯವಿಲ್ಲ.

# ಸಹ್ಯಾದ್ರಿಯಲ್ಲಿ ಸ್ವಯಂ ರಕ್ಷಣಾ ತರಬೇತಿ


ಪ್ರಜಾವಾಣಿ ವಾರ್ತೆ

ಮಂಗಳೂರು: ಸಹ್ಯಾದ್ರಿ ಕಾಲೇಜಿನಲ್ಲಿ ಮೊದಲ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸ್ವಯಂ ರಕ್ಷಣಾ ತರಬೇತಿ ನಡೆಯಿತು.

ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಆಕ್ರಮಣ ಮತ್ತು ಕಿರುಕುಳಗಳಿಂದ ರಕ್ಷಿಸಿಕೊಳ್ಳಲು ಸಹ್ಯಾದ್ರಿ ಎನ್‌ಎಸ್‌ಎಸ್ ಯುನಿಟ್ ಸ್ವಯಂ ರಕ್ಷಣಾ ತರಬೇತಿಯನ್ನು ಸ್ವರಕ್ಷಾ ಮಹಿಳಾ ಟ್ರಸ್ಟ್‌ನ ಸಂಸ್ಥಾಪಕ ಸಿಇಒ ಕಾರ್ತಿಕ್ ಎಸ್. ಅವರ ನೇತೃತ್ವದಲ್ಲಿ ಆಯೋಜಿಸಿತು.

ಅಪಾಯದಲ್ಲಿ ವಿದ್ಯಾರ್ಥಿಗಳು ತಮ್ಮನ್ನು ರಕ್ಷಿಸಿಕೊಳ್ಳಲು ಬಳಸಬಹುದಾದ ಹಲವಾರು ಸ್ವಯಂ-ರಕ್ಷಣಾ ತಂತ್ರಜ್ಞಾನ ಮತ್ತು ತಂತ್ರಗಳನ್ನು ಹೇಳಿಕೊಡಲಾಯಿತು. ಆಕ್ರಮಣಕಾರರಿಂದ ಸ್ವಯಂ ರಕ್ಷಿಸಲು ಬಳಸಬಹುದಾದ ಮಾನಸಿಕ ಮತ್ತು ತಾರ್ಕಿಕ ತಂತ್ರಗಳನ್ನು ಕಾರ್ತಿಕ್ ವಿವರಿಸಿದರು.

ಅಪಹರಣ, ದೌರ್ಜನ್ಯಗಳು, ಸಾಮೂಹಿಕ ಅತ್ಯಾಚಾರದಂತಹ ಅಪಾಯಕಾರಿ ಸಂದರ್ಭ ಎದುರಾದಾಗ ಅನುಸರಿಸಬೇಕಾದ ಕ್ರಮಗಳನ್ನು ತಿಳಿಸಿಕೊಡಲಾಯಿತು.



ಸಹ್ಯಾದ್ರಿ ಕಾಲೇಜಿನಲ್ಲಿ ಮೊದಲ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸ್ವಯಂ ರಕ್ಷಣಾ ತರಬೇತಿ ನಡೆಯಿತು.